ಕರ್ನಾಟಕ ಸರ್ಕಾರ

ಸಂಖ್ಯೆ ಸಕಇ 119 ಬಿಸಿಎ 95

ಕರ್ನಾಟಕ ಸರ್ಕಾರದ ಸಚಿವಾಲಯ-2
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿನಾಂಕ: 28-10-1996

## ಸುತ್ತೋಲೆ

ವಿಷಯ: ಹಿಂದುಳಿದ ವರ್ಗಗಳ ಜಾತಿ ಪ್ರಮಾಣ ಪತ್ರ ನೀಡುವ ಬಗ್ಗೆ

—

ಸರ್ಕಾರದ ಆದೇಶ ಸಂಖ್ಯೆ ಸಕಇ 150 ಬಿಸಿಎ 94 ದಿನಾಂಕ: 17-9-94 ರನ್ವಯ ಹಿಂದುಳಿದ ವರ್ಗಗಳೆಂದು ವರ್ಗೀಕರಿಸಿ ಪ್ರವರ್ಗ 1, IIಎ, IIಬಿ ಹಾಗೂ IIIಎ, IIIಬಿ ಗಳಲ್ಲಿ ಸೇರಿಸಲಾಗಿರುವ ಜಾತಿಗಳಿಗೆ ಸೇರಿದ ಅಭ್ಯರ್ಥಿಯು ಜಾತಿ ಪ್ರಮಾಣ ಪತ್ರ/ ಸಿಂಧುತ್ವ ಪ್ರಮಾಣ ಪತ್ರ ಪಡೆಯುವಲ್ಲಿ ಸಂಬಂಧಪಟ್ಟ ಪ್ರಾಧಿಕಾರಿಗಳ ಪರಿಶೀಲನೆಗಾಗಿ ಅಭ್ಯರ್ಥಿ/ ಅಭ್ಯರ್ಥಿಯ ತಂದೆ ಅಥವಾ ವಂಶ ಪೂರ್ವಜರು ತಾನು ಕ್ಲೈಮ್ ಮಾಡಿರುವ ಜಾತಿಗೆ ಸೇರಿರುವರೆಂದು ಸಮರ್ಥಿಸಲು ಶಾಲಾ ಪ್ರವೇಶ ವಹಿ ಇಲ್ಲವೆ ಇನ್ನಿತರ ದಾಖಲಾತಿಗಳನ್ನು ಒದಗಿಸಬೇಕಾಗಿರುತ್ತದೆ. ಆದರೆ ಇಂತಹ ದಾಖಲಾತಿಗಳು ಇಲ್ಲದಂತಹ ಪ್ರಕರಣಗಳಲ್ಲಿ, ಜಾತಿ ಪ್ರಮಾಣ ಪತ್ರ/ ಸಿಂಧುತ್ವ ಪ್ರಮಾಣ ಪತ್ರ ನೀಡುವ ಪ್ರಾಧಿಕಾರಿಗಳು ಅಭ್ಯರ್ಥಿಗೆ ಜಾತಿ ಪ್ರಮಾಣ ಪತ್ರವನ್ನು ನೀಡುತ್ತಿಲ್ಲವೆಂದು ಹಾಗೂ ಇದರಿಂದ ಅಭ್ಯರ್ಥಿಗಳಿಗೆ ತೀವ್ರ ಅನಾನುಕೂಲವಾಗುತ್ತದೆಂದೆಂದೂ ಮತ್ತು ಈ ಸಮಸ್ಯೆಯನ್ನು ನಿವಾರಿಸುವ ಕುರಿತು ಸಂಬಂಧಪಟ್ಟ ಪ್ರಾಧಿಕಾರಿಗಳಿಗೆ ನಿರ್ದಿಷ್ಟ ಮಾರ್ಗಸೂಚಿಗಳನ್ನು ನೀಡಬೇಕೆಂದು ಹಲವಾರು ಜಾತಿಗಳ ಪ್ರತಿನಿಧಿಗಳು ಮನವಿ ಮಾಡಿಕೊಂಡಿರುತ್ತಾರೆ.

ಹಿಂದುಳಿದ ವರ್ಗಕ್ಕೆ ಸೇರಿರುವಂತಹ ಅಭ್ಯರ್ಥಿಗಳ ವಶದಲ್ಲಿ ಜಾತಿಯ ಬಗ್ಗೆ ನಿಖರವಾದ ದಾಖಲೆಗಳು ಲಭ್ಯವಿಲ್ಲದಿರುವ ಸಂದರ್ಭದಲ್ಲಿ ಜಾತಿ ಪ್ರಮಾಣ ನೀಡುವ ಪ್ರಾಧಿಕಾರಿಯು ಸ್ಥಳೀಯ ವಿಚಾರಣೆ ನಡೆಸಿ ಸದರಿ ಅಭ್ಯರ್ಥಿಗಳು ಖಚಿತವಾಗಿ ಕ್ಲೈಮ್ ಮಾಡಿರುವ ಜಾತಿಗೆ ಸೇರಿರುವ ಬಗ್ಗೆ ವಿಚಾರಣೆಯಿಂದ ದೃಢಪಡಿಸಿಕೊಂಡು ಜಾತಿ ಪ್ರಮಾಣ ಪತ್ರವನ್ನು ನೀಡಬಹುದೆಂದೂ ಹಾಗೂ ಇಂತಹ ಸಂದರ್ಭಗಳಲ್ಲಿ ಜಾತಿ ಪ್ರಮಾಣ ಪತ್ರಗಳನ್ನು ನೀಡುವ ಮುನ್ನ ಸ್ಥಾನಿಕ ವಿಚಾರಣೆ ಹಾಗೂ ಸಾಕ್ಷಾಧಾರಗಳ ಬಗ್ಗೆ ಸುದೀರ್ಘವಾದ ನಡವಳಿಗಳನ್ನು ತಯಾರಿಸಿ ಕಡತಗಳಲ್ಲಿಡುವಂತೆ ಸೂಚಿಸಲಾಗಿದೆ. ಇಂತಹ ಪ್ರಕರಣಗಳಲ್ಲಿ ಜಿಲ್ಲಾ ಜಾತಿ/ ಆದಾಯ ಪರಿಶೀಲನಾ ಸಮಿತಿಯು ಈ ಮೇಲೆ ತಿಳಿಸಿದ ಮಾರ್ಗವನ್ನೇ ಅನುಸರಿಸಿ ಅಭ್ಯರ್ಥಿಗಳು ಕ್ಲೈಮ್ ಮಾಡಿರುವ ಜಾತಿಗೆ ಸೇರಿರುವ ಬಗ್ಗೆ ಖಚಿತಪಡಿಸಿಕೊಂಡು ಸಿಂಧುತ್ವ ಪ್ರಮಾಣ ಪತ್ರವನ್ನು ನೀಡಬಹುದೆಂದು ಸ್ಪಷ್ಟೀಕರಿಸಿದೆ.

(ಬಿ.ಎಸ್. ಯಕ್ಕಣಿ)
ಸರ್ಕಾರದ ಅಧೀನ ಕಾರ್ಯದರ್ಶಿ
ಸಮಾಜ ಕಲ್ಯಾಣ ಇಲಾಖೆ

ಗೆ

ಸಂಕಲನಕಾರರು ಕರ್ನಾಟಕ ರಾಜ್ಯ ಪತ್ರ ಬೆಂಗಳೂರು ಇವರಿಗೆ ವಿಶೇಷ ಪತ್ರಿಕೆಯಲ್ಲಿ ಪ್ರಕಟಿಸುವಂತೆ ಹಾಗೂ ಮುದ್ರಿತ 50 ಪ್ರತಿಗಳನ್ನು ಕಳುಹಿಸಿಕೊಡುವಂತೆ ಕೋರಿ ಕಳುಹಿಸಿದೆ.

ಪ್ರತಿಯನ್ನು

1. ನಿರ್ದೇಶಕರು ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆ, ನಂ 49 ಮಾಣಿಕ್ಯವೇಲು ಮ್ಯಾನ್ಷನ್ ಅರಮನೆ ರಸ್ತೆ, ಬೆಂಗಳೂರು-52
2. ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ
3. ರಾಜ್ಯದ ಎಲ್ಲಾ ಉಪ ವಿಭಾಗಾಧಿಕಾರಿಗಳಿಗೆ
4. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ
5. ರಾಜ್ಯದ ಎಲ್ಲಾ ಜಿಲ್ಲಾ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಅಧಿಕಾರಿಗಳಿಗೆ
6. ರಾಜ್ಯದ ಎಲ್ಲಾ ತಹಶೀಲ್ದಾರರುಗಳಿಗೆ
7. ಮಾನ್ಯ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿಗಳು